ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು

ಸಿ.ಸಿ. ನಂ.185/2022

ಸಿ.ಡಬ್ಲ್ಯೂ.: 9
ಪಿ.ಡಬ್ಲ್ಯೂ.: 4

**ದಿ: 11-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಅಕ್ಕಿ ತಿಪ್ಪೆಸ್ವಾಮಿ

ತಂದೆಯ ಹೆಸರು : ಬಸವರಾಜಪ್ಪ.ಕೆ

ವಯಸ್ಸು : 46 ವರ್ಷ

ಉದ್ಯೋಗ : ಜಿಂದಾಲನಲ್ಲಿ ಕೆಲಸ

ವಾಸಸ್ಥಳ : ವಡ್ಡು ಗ್ರಾಮ.

**ಸಾಕ್ಷಿಯ ಮುಖ್ಯ ವಿಚಾರಣೆ : ಸ.ಸ.ಅ.ರವರಿಂದ:**

ಈಗ ಸುಮಾರು 2-3 ವರ್ಷಗಳ ಹಿಂದೆ ನಾನು ಪೋಲಿಸ ಠಾಣಗೆ ಬೇರ ಕೇಲಸಕ್ಕೆ ಹೋದಾಗ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ-3 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 (ಸಿ) ಎಂದು

ಗುರುತಿಸಲಾಯಿತು. ನಿಪಿ-3 ರಲ್ಲಿ ಬರೆದಿರುವ ವಿಷಯ ನನಗೆ ಗೊತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಆದ್ದರಿಂದ ಅವರಿಗೆ ಅನುಮತಿ ನೀಡಲಾಯಿತು)**

**ಪಾಟಿ ಸವಾಲು : ಸ.ಸ. ಅ. ರವರಿಂದ:**

ದಿಃ 20.02.2022 ರಂದು ನಾನು ಮತ್ತು ಚಾಸಾ-10 ರವರ ಸಮಕ್ಷಮ ಉಬ್ಬಲಗುಡಿ ಗ್ರಾಮದಲ್ಲಿ ಪ್ರಶಾಂತ ಟಿಫನ ಸೆಂಟರ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ಮೇಲೆ ಪೋಲಿಸರು ದಾಳಿ ಅವನ ಕಡೆಯಿಂದ ಮದ್ಯದ ಪೌಚಗಳನ್ನು ಜಪ್ತಿ ಪಡಿಸಿಕೊಂಡು ಮಹಜರ ಸಂಜೆ 06.30 ಗಂಟೆಯಿಂದ 07.00 ಗಂಟೆಯವರೆಗೆ ಮಾಡಿ ನನ್ನ ಮತ್ತು ಚಾಸಾ-10 ರವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಇರುವ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರಃ ಇಲ್ಲ.**

**ಮರು ವಿಚಾರಣೆಃ ಇಲ್ಲ.**

( ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಲ್ಲಿ ಹೇಳಿ ಬೆರಳಚ್ಚು ಮಾಡಿಸಲಾಯಿತು )

ಓ. ಹೆ. ಕೆ.ಸರಿ ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,ಸಂಡೂರು